3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೆಬೆನ್ನೂರು

**ದಿನಾಂಕ 26-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆಬಿಬಿ ವಕೀಲರಿಂದಃ**

ನಾನು ರಿಯಲ್ ಎಸ್ಟೇಟ್ ದಲ್ಲಾಳಿಯಾಗಿ ವ್ಯವಹಾರ ಮಾಡುತ್ತೇನೆ. ಹಾಗೂ ನನ್ನದು ಇಟ್ಟಂಗಿ ಅಂಗಡಿ ಇದೆ. ಆರೋಪಿ ಮತ್ತು ನನ್ನ ಮಧ್ಯೆ ಯಾವುದೇ ವ್ಯವಹಾರ ಆಗಿಲ್ಲ ಮತ್ತು ನಾವು ಪರಿಚಯಸ್ಥರು ಅಲ್ಲ ಎಂದರೆ ಸರಿ ಅಲ್ಲ. ನನ್ನ ಮತ್ತು ಆರೋಪಿತರ ಮಧ್ಯೆ ಯಾವುದೇ ವ್ಯವಹಾರದ ಪ್ರಮೇಯ ಆಗಿಲ್ಲ ಎಂದರೆ ಸರಿ ಅಲ್ಲ. ಆರೋಪಿ ಹಾವೇರಿಯಲ್ಲಿ ನಮ್ಮ ಮಾವನ ದಲ್ಲಾಳಿ ಅಂಗಡಿಯಲ್ಲಿ ಈಗಲೂ ಕೆಲಸ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಮಾವನ ಅಂಗಡಿಯಲ್ಲಿ ಜೋಳ ಮತ್ತು ಹತ್ತಿಯ ವ್ಯಾಪಾರ ಬಹಳ ವರ್ಷಗಳಿಂದ ಮಾಡುತ್ತಿದ್ದಾನೆ ಎಂದರೆ ಸರಿ ಅಲ್ಲ.

ನನ್ನ ಮಾವ ಆರೋಪಿತನ ಕಡೆಯಿಂದ ಚೆಕ್ಕನ್ನು ಪಡೆದುಕೊಂಡಿದ್ದು, ಆ ಚೆಕ್ಕನ್ನು ನನಗೆ ಕೊಟ್ಟು ಈ ಫಿರ್ಯಾದಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಆರೋಪಿ ಆತನಿಗೆ ದುಡ್ಡು ಬೇಕು ಎಂದು ನವೆಂಬರ್ 2 ನೇ ವಾರದಲ್ಲಿ ನನ್ನ ಕಡೆ ಬಂದಿದ್ದ. ಹಣವನ್ನು ಅದೇ ದಿನ ಪಡೆದಿರುತ್ತಾನೆ. ಸದರಿ ಆ ಹಣದ ಮುಖಬೆಲೆಗಳು ನನಗೆ ಈಗ ನೆನಪಿಲ್ಲ. ಆರೋಪಿ 2 ತಿಂಗಳ ಒಳಗಾಗಿ ಹಣ ಮರಳಿ ಕೊಡುತ್ತೇನೆ ಎಂದು ವಾಗ್ದಾನ ಮಾಡಿದ್ದ. ನಾನು ಮೊದಲನೇ ವಾರದ ಡಿಸೆಂಬರ್ 2022 ರಲ್ಲಿ ಆರೋಪಿಗೆ ಹಣ ಕೇಳಿದ್ದೆ. ನಾನು ಆರೋಪಿಗೆ ಹಣ ಕೊಟ್ಟಿಲ್ಲ ಮತ್ತು ನಾನು ಹೋಗಿ ಆರೋಪಿಗೆ ಕೇಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿ ಅಲ್ಲ. ಸದ್ರಿ ಆರೋಪಿ ನನಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಚೆಕ್ ನಂಬ್ರ 317738 ಅಂತ ಇದೆ.

ಆರೋಪಿ ಕೇವಲ ಸಹಿ ಮಾಡಿ ಮಾತ್ರ ನನಗೆ ಚೆಕ್ಕನ್ನು ಕೊಟ್ಟಿರುತ್ತಾನೆ ಎಂದರೆ ಸರಿ ಅಲ್ಲ.

ಸಹಿ ಮಾಡಿ ಬರೆದು ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಸದ್ರಿ ಚೆಕ್ಕಿನಲ್ಲಿ ಸಹಿ ಮಾತ್ರ ಆರೋಪಿ ಮಾಡಿದ್ದು, ಉಳಿದ ಹೆಸರು ಮತ್ತು ದಿನಾಂಕ ನಾನು ಬರೆದುಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. ದಿನಾಂಕ 29-12-2020 ರಲ್ಲಿ ನಾನು ಬ್ಯಾಂಕ್‌ಗೆ ಚೆಕ್ಕನ್ನು ಹಾಜರುಪಡಿಸಿ ಬಟವಾಡೆಗಾಗಿ ದಾಖಲಿಸಿದ್ದೆ. ಆರೋಪಿ ಚೆಕ್ಕನ್ನು ಅದೇ ದಿನ ನನಗೆ ನೀಡಿದ್ದ. ದಿನಾಂಕ 30-12-2020 ರಂದು ಚೆಕ್ ಅಮಾನ್ಯಗೊಂಡು ನನಗೆ ಹಿಂಬರಹ ಕೊಟ್ಟಿರುತ್ತಾರೆ. ಚೆಕ್ ಅಮಾನ್ಯಗೊಂಡ ನಂತರ ಆರೋಪಿಗೆ ಫೋನ್ ಮೂಲಕ ತಿಳಿಸಿರುತ್ತೇನೆ. ಆಗ ಆರೋಪಿ ತಾನು ಬಂದು ಮಾತನಾಡುತ್ತೇನೆ ಎಂದು ಹೇಳಿದ ಆದರೆ ನಂತರದಲ್ಲಿ ಯಾವುದೇ ಪ್ರತಿಕ್ರಿಯೆ ತೋರಿಸಲಿಲ್ಲ.

ಆರೋಪಿ ಶಿಕ್ಷಕನಾಗಿರುತ್ತಾನೆ. ಆರೋಪಿ ತಲೆಮರೆಸಿಕೊಂಡಿದ್ದ ಎಂದು ತೋರಿಸಲು ಇರುವ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಆರೋಪಿಗೆ ನಾನು 2 - 3 ಬಾರಿ ಹೋಗಿ ಫೋನ್ ಮಾಡಿದ್ದೆ ಆದರೂ ಕೂಡ ಆರೋಪಿ ಯಾವುದೇ ಪ್ರತಿಕ್ರಿಯೆ ತೋರಿಸಿಲ್ಲ. ನಂತರ ವಕೀಲರ ಮೂಲಕ ನೋಟೀಸ್ ಕೊಟ್ಟು ನ್ಯಾಯಾಲಯಕ್ಕೆ ಫಿರ್ಯಾದಿ ದಾಖಲಿಸಿರುತ್ತೇನೆ. ವಕೀಲರಿಗೆ ಬೇಡಿಕೆ ನೋಟೀಸನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನಾನು ಯಾವ ದಿನದಂದು ನೋಟೀಸ್ ಕೊಟ್ಟಿದ್ದೇನೆ ಎಂದು ಗೊತ್ತಿದ್ದರೂ ಸಹ ದಿನಾಂಕ ನೆನಪಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ನೋಟೀಸ್ ಯಾವ ದಿನಾಂಕದಂದು ಮುಟ್ಟಿದೆ ಎಂದು ನೆನಪಿಲ್ಲ.

ಆರೋಪಿಗೆ ನೋಟೀಸ್ ಜಾರಿಯಾದ ಬಗ್ಗೆ ಸ್ವೀಕೃತಿ ಪತ್ರ ಬಂದಿರುತ್ತದೆ. ಬಂದಿದ್ದನ್ನು ನಾನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಆರೋಪಿ ನನ್ನ ಮಾವನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಚೆಕ್ಕನ್ನು ನನ್ನ ಮಾವನ ಬಳಿಗೆ ಕೊಟ್ಟಿದ್ದು, ಅಲ್ಲಿ ಆ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ನನ್ನ ಮೂಲಕ ನನ್ನ ಮಾವ ಈ ಫಿರ್ಯಾದಿಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ ಅಲ್ಲ. ಖಾಲಿ ಇರುವ ಚೆಕ್ಕಿನಲ್ಲಿ 4 ಲಕ್ಷ ಎಂದು ಬರೆದು ಅದರ ಬದಲು 8 ಲಕ್ಷ ಹಣ ಮರಳಿ ಕೊಡಿರಿ ಎಂದು ಸುಳ್ಳು ಫಿರ್ಯಾದಿ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ಕಾರಣ ಆರೋಪಿ ಹಣ ಮರಳಿ ಕೊಡಲು ಯಾವುದೇ

ಅವಶ್ಯಕತೆ ಇಲ್ಲ ಎಂದರೆ ಸರಿ ಅಲ್ಲ. ಆ ಪ್ರಕಾರ ಆರೋಪಿ ನನಗೆ ಹಣ ಕೊಡಬೇಕು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಆರೋಪಿತನನ್ನು ನೋಡಿಲ್ಲ, ಆದಾಗ್ಯೂ ಸಹ ಸುಳ್ಳು ಚೆಕ್ಕನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಈ ಕಾರಣಗಳಿಂದಾಗಿ ಆರೋಪಿ ನನಗೆ ಹೆಚ್ಚಿನ ಮೊತ್ತ ಅಥವಾ ಅದಕ್ಕಿಂತ ಮುಂದುವರಿದ ಮೊತ್ತದಲ್ಲಿ ಆರೋಪಿ ನನಗೆ ಹಣ ಕೊಡುವ ಪ್ರಮೇಯ ಇಲ್ಲ ಮತ್ತು ಆತನಿಗೆ ಕಾನೂನುಬದ್ಧ ಹಣ ವಾಪಸು ಕೊಡುವ ಯಾವುದೇ ಜವಾಬ್ದಾರಿ ಇಲ್ಲ ಎಂದರೆ ಸರಿ ಅಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫಸಿ, ರಾಣೆಬೆನ್ನೂರ.**

**ಸಾಕ್ಷಿದಾರರ ಸಹಿಃ**

Accused absent, EP filed. Same is allowed.

Complainant counsel present.

PW-1 present and fully cross-examined by counsel for defence.

Advocate for defence present and prays time for cross of PW-1 but no valid reasons are assigned, hence prayer is rejected and cross of PW-1 is taken as nil.

No further evidence on behalf of complainant, hence complainant side evidence closed.

Statement of accused U/ sec.313 of Cr.P.C is already recorded. Hence case is posted for defence evidence .

Accused present.

Defence counsel present.

PW.1 present.

Complainant filed application U/sec 311 of Cr.PC for recall of PW.1 for further chief examination along with list of documents.

The defence counsel

submitted no objection to allow the application.

Heard and perused.

Application filed by complainant U/sec 311 of Cr.PC is hereby allowed on cost of Rs.200/-.

PW.1 further chief examined and got marked Ex.P.6 to 9.

For cross examination prays time.

For cross of PW.1.

Call on 27-07-2024.

III Addl.Sr.C.J. & JMFC., RNR.